APRIL 26, 2025

AKASHAVANI - DHARWAD

PRADESH SAMACHARA (KANNADA) 07.05 A.M.

ಆಕಾಶವಾಣಿ

ಪ್ರದೇಶ ಸಮಾಚಾರ

ಮುಖ್ಯಾಂಶಗಳು

- ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರದ, 'ಬಸವ ರಾಷ್ಟ್ರೀಯ ಪುರಸ್ಕಾರ'; ಗ್ರಂಥಾಲಯ ವಿಜ್ಞಾನಿ, ಧಾರವಾಡದ ಎಸ್.ಆರ್. ಗುಂಜಾಳ, ಭಾಜನ.

- ಡಿಜಿಟಲ್ ಭೂ ದಾಖಲೆ ಒದಗಿಸುವ, ನೂತನ ಭೂ ಸುರಕ್ಷಾ ಯೋಜನೆ, 29ರಿಂದ ರಾಜ್ಯಾದ್ಯಂತ ಜಾರಿಗೆ.
- ಇಂದು, ಬೌದ್ಧಿಕ ಹಕ್ಕು, 'ಪೇಟೆಂಟ್' ಜಾಗ್ರತಿ, ದಿನಾಚರಣೆ.
- ಇಂದು, ರಾಷ್ಟ್ರೀಯ ಉದ್ಯೋಗ ಮೇಳ; 51 ಸಾವಿರ ನೇಮಕಾತಿ ಪತ್ರಗಳ ವಿತರಣೆ.

<><><>

ಈಗ ವಾರ್ತೆಗಳ ವಿವರ

<><><>

ಬಾಗಲಕೋಟೆ ಜಿಲ್ಲೆ, ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರ, ಇದೇ 29 ಹಾಗೂ 30 ರಂದು, ಕೂಡಲಸಂಗಮದಲ್ಲಿ ಆಯೋಜಿಸಿರುವ, 'ಅನುಭವ ಮಂಟಪ; ಬಸವಾದಿ ಶರಣರ ವೈಭವ' ಕಾರ್ಯಕ್ರಮದಲ್ಲಿ, ಧಾರವಾಡದ ಹಿರಿಯ ಗ್ರಂಥಾಲಯ ವಿಜ್ಞಾನಿ, ಎಸ್.ಆರ್. ಗುಂಜಾಳ ಅವರಿಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, 'ಬಸವ ರಾಷ್ಟ್ರೀಯ ಪುರಸ್ಕಾರ' ಪ್ರದಾನಿಸಿ, ಗೌರವಿಸಲಿದ್ದಾರೆ.

ಈ ಕಾರ್ಯಕ್ರಮ, ಜನೋತ್ಸವವಾಗಿ ಶ್ರದ್ಧೆ, ಭಕ್ತಿ ಹಾಗೂ ವಿಜೃಂಭಣೆಯಿಂದ ಜರುಗಲಿದೆ ಎಂದು, ಮುಖ್ಯಮಂತ್ರಿ ತಿಳಿಸಿದ್ದಾರೆ.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ ಧ್ವನಿ 40 ಸೆಕೆಂದುಗಳು

<><><>

ರಾಜ್ಯಾದ್ಯಂತ ಪ್ರವಾಸ ಕೈಗೊಂಡ, ಅನುಭವ ಮಂಟಪ ರಥ ಯಾತ್ರೆ, ಕಲಬುರಗಿಯಿಂದ ಜೇವರ್ಗಿ ಮಾರ್ಗವಾಗಿ, ವಿಜಯಪುರ ಜಿಲ್ಲೆಯತ್ತ ಪ್ರಯಾಣ ಆರಂಭಿಸಿದೆ. ನಾಳೆ ಧಾರವಾಡಕ್ಕೆ ಆಗಮಿಸಲಿದ್ದು, ಜಿಲ್ಲಾಡಳಿತ ಸ್ವಾಗತಿಸಲು ಸಿದ್ಧವಾಗಿದೆ.

<><><>

ಹೊಸ ದಿಲ್ಲಿಯ ಸಂಸತ್ ಭವನದಲ್ಲಿ, ಇದೇ 30 ರಂದು ಭಕ್ತಿ ಭಾಂಡಾರಿ ಬಸವಣ್ಣನವರ ಜಯಂತಿಯನ್ನು, ಆಚರಿಸಲಾಗುವುದು ಎಂದು, ಕೇಂದ್ರ ರೇಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ, ಬೆಂಗಳೂರಿನಲ್ಲಿ ತಿಳಿಸಿದ್ದಾರೆ.

<><><>

ರಾಜ್ಯದ ಜನರಿಗೆ, ಆಸ್ತಿಯ ಡಿಜಿಟಲ್ ಭೂ ದಾಖಲೆ ಒದಗಿಸಲು, ಇದೇ 29ರಂದು ನೂತನ ಭೂ ಸುರಕ್ಷಾ ಯೋಜನೆ ಜಾರಿಗೊಳಿಸುವುದಾಗಿ, ಕಂದಾಯ ಖಾತೆ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ. ಬೆಂಗಳೂರಿನ ವಿಕಾಸಸೌಧದಲ್ಲಿ ಕಂದಾಯ ಇಲಾಖೆಯ, ಮಾಸಿಕ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಸಚಿವರು, ರಾಜ್ಯ ಸರ್ಕಾರಕ್ಕೆ ಎರಡು ವರ್ಷಗಳು ತುಂಬುತ್ತಿವೆ. ಮೇ 16 ರಂದು, ಮಂಗಳೂರಿನಲ್ಲಿ 10 ಸಾವಿರ ಜನರಿಗೆ ಭೂ ಮಾಲಿಕತ್ವದ ದರ್ಖಾಸ್ತು ಪೋಡಿ ವಿತರಿಸಲಾಗುವುದು. ವಿಜಯನಗರ ಜಿಲ್ಲೆ, ಹೊಸಪೇಟೆಯಲ್ಲಿ ಒಂದು ಲಕ್ಷ ಫಲಾನುಭವಿಗಳಿಗೆ, ಹಕ್ಕುಪತ್ರ ವಿತರಿಸಲಾಗುವುದು ಎಂದರು.

<><><>

'ಬೌದ್ಧಿಕ ಹಕ್ಕು ಮತ್ತು ಸಂಗೀತ; ಬೌದ್ಧಿಕ ಹಕ್ಕಿನ ಲಯ ಆಸ್ವಾದಿಸಿ' ಎಂಬ ಧ್ಯೇಯದೊಂದಿಗೆ, ಬೌದ್ಧಿಕ ಹಕ್ಕು ದಿನವನ್ನು ಇಂದು, ಆಚರಿಸಲಾಗುತ್ತಿದೆ. ಬೌದ್ಧಿಕ ಹಕ್ಕು, ಕೃತಿಸ್ವಾಮ್ಯ ಹಕ್ಕು, ವ್ಯಾಪಾರ ಚಿನ್ಹೆ ಹಾಗೂ ವಿಶೇಷ ವ್ಯವಹಾರ ಲಾಂಛನಗಳು, ಶ್ರೀ ಸಾಮಾನ್ಯರ ದೈನಂದಿನ ಬದುಕನ್ನು ಪ್ರಭಾವಿಸುವ ಪರಿ ಬಗ್ಗೆ, ಚಿಂತನ–ಮಂಥನ ಹಾಗೂ ಜನ ಜಾಗ್ರತಿ ಮೂಡಿಸುವ ದಿನವಾಗಿ, ಆಚರಿಸಲಾಗುತ್ತಿದೆ.

<><><>

ಧಾರವಾಡ ಕೃಷಿ ವಿಶ್ವವಿದ್ಯಾಲಯದ, ಸಮುದಾಯ ವಿಜ್ಞಾನ ಮಹಾವಿದ್ಯಾಲಯ ಅಧೀನದ, ಆಹಾರ ಸಂಶೋಧನೆ ಮತ್ತು ತಾಂತ್ರಿಕತೆ ವಿಭಾಗ ಸಂಶೋಧಿಸಿದ, ಮಧುಮೇಹ ನಿಯಂತ್ರಿಸಬಲ್ಲ, ಗೋಧಿ, ಬಕ್ ವ್ಹೀಟ್ ವಿಶೇಷ ಖಾದ್ಯಕ್ಕೆ, ಪೇಟೆಂಟ್ ಲಭಿಸಿದೆ. ಜೀವನ ಶೈಲಿ ರೋಗಗಳಿಗೆ, ಪೋಷಕಾಂಶಗಳ ಆಗರ, ಬಕ್ ವ್ಹೀಟ್ ಅತ್ಯುತ್ತಮ ಆಹಾರವಾಗಿದೆ ಎನ್ನುತ್ತಾರೆ, ವಿಜ್ಞಾನಿ ಉಮಾ ಕುಲಕರ್ಣಿ.

<><><>

ಡಾ.ಉಮಾ ಕುಲಕರ್ಣಿ 50 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ಇಂದು, ದೇಶಾದ್ಯಂತ 15ನೇ ಆವೃತ್ತಿಯ, ರಾಷ್ಟ್ರೀಯ ಉದ್ಯೋಗ ಮೇಳ, 47 ಸ್ಥಳಗಳಲ್ಲಿ ಆಯೋಜಿತವಾಗಿದೆ. 51 ಸಾವಿರ ನೇಮಕಾತಿ ಪತ್ರಗಳನ್ನು ವಿತರಿಸಲಾಗುತ್ತಿದೆ.

<><><>

ಬೆಂಗಳೂರು ಪಶ್ಚಿಮ ವಲಯ, ಸರಕು ಮತ್ತು ಸೇವಾ ತೆರಿಗೆ, ಕೇಂದ್ರ ಆಯುಕ್ತಾಲಯದಿಂದ, ಬೆಂಗಳೂರಿನ ಜಾಲಹಳ್ಳಿಯ, ಕಸ್ಟಮ್ಸ್ ಪರೋಕ್ಷ ತೆರಿಗೆ ಮತ್ತು ಮಾದಕ ದ್ರವ್ಯಗಳ ರಾಷ್ಟ್ರೀಯ ಸಂಸ್ಥೆಯ ಆವರಣದಲ್ಲಿ ಆಯೋಜಿತ, ಉದ್ಯೋಗ ಮೇಳವನ್ನು, ಕೇಂದ್ರ ರೇಲ್ವೆ ಖಾತೆ, ರಾಜ್ಯ ಸಚಿವ ವಿ. ಸೋಮಣ್ಣ ಉದ್ಘಾಟಿಸಲಿದ್ದಾರೆ.

<><><>

ಹುಬ್ಬಳ್ಳಿಯ ಕೆ.ಎಲ್.ಇ ತಾಂತ್ರಿಕ ವಿಶ್ವವಿದ್ಯಾಲಯದ, ಬಿ.ವಿ. ಭೂಮರೆಡ್ಡಿ ಅಭಿಯಾಂತ್ರಿಕ ಮಹಾವಿದ್ಯಾಲಯದಲ್ಲಿ, ಇಂದು ಬೆಳಗ್ಗೆ 10 ಗಂಟೆಗೆ ಆಯೋಜಿತ ಕಾರ್ಯಕ್ರಮದಲ್ಲಿ, ಕೇಂದ್ರದ ಯುವ ವ್ಯವಹಾರ ಮತ್ತು ಕ್ರೀಡಾ ಖಾತೆ ರಾಜ್ಯ ಸಚಿವರಾದ, ರಕ್ಷಾ ಖಡ್ಸೆ, 50 ಜನರಿಗೆ ನೇಮಕಾತಿ ಆದೇಶ ನೀಡಲಿದ್ದಾರೆ ಎಂದು, ಆದಾಯ ತೆರಿಗೆ ಇಲಾಖೆ ಜಂಟಿ ಆಯುಕ್ತ ಎಚ್. ರವೀಂದ್ರ ತಿಳಿಸಿದ್ದಾರೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ವರ್ಚುವಲ್ ವೇದಿಕೆ ಮೂಲಕ, ಸಭೆಯನ್ನುದ್ದೇಶಿಸಿ, ಮಾತನಾಡಲಿದ್ದಾರೆ.

<><><>

ಉಡುಪಿ ಜಿಲ್ಲೆ, ಕುಂದಾಪುರ ವಲಯ ವ್ಯಾಪ್ತಿಯ, ಹೆಸಕೆತ್ತೂರು ಗ್ರಾಮದ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ, ಗ್ರಾಮೀಣ ಭಾಗದ ಮಕ್ಕಳ, ಇಂಗ್ಲಿಷ್ ಭಾಷೆಯ ಕಲಿಕೆಯನ್ನು ಪ್ರೋತ್ಸಾಹಿಸಲು, ಐದು ತಿಂಗಳ ಹಿಂದೆ 'ಭಾಷಾ ಪ್ರಯೋಗಾಲಯ' ಆರಂಭಿಸಲಾಗಿದೆ. ಶಾಲೆಯ ಸಹ ಶಿಕ್ಷಕ ಅಶೋಕ ತೆಕ್ಕಟ್ಟೆ ಅವರ ಪ್ರಯತ್ನದ

ಫಲವಾಗಿ, ಇಂಗ್ಲಿಷ್ ಲ್ಯಾಂಗ್ವೇಜ್ ಲ್ಯಾಬ್, ಮಕ್ಕಳ ಕಲಿಕೆಯನ್ನು ನಲಿಕೆಯಾಗಿಸಿದೆ. ಪ್ರದೇಶ ಸಮಾಚಾರಕ್ಕಾಗಿ, ಅಶೋಕ ತೆಕ್ಕಟ್ಟೆ ತಮ್ಮ ಅನುಭವ ಹಂಚಿಕೊಂಡಿದ್ದಾರೆ.

<><><>

ಅಶೋಕ ತೆಕ್ಕಟ್ಟೆ ಧ್ವನಿ 50 ಸೆಕೆಂದುಗಳು

<><><>

ವಿಶ್ವ ಲಸಿಕಾ ಸಪ್ತಾಹ, ಪ್ರತಿ ವರ್ಷ ಏಪ್ರಿಲ್ 24 ರಿಂದ 30ರ ವರೆಗೆ ಜರುಗುತ್ತದೆ. ದಢಾರ, ರುಬೆಲ್ಲಾ ಸೇರಿದಂತೆ, 2 ವರ್ಷ ತುಂಬುವ ಮುನ್ನ, 12 ಮಾರಕ ರೋಗಗಳಿಂದ ಕಂದಮ್ಮಗಳನ್ನು ರಕ್ಷಿಸುವ, ಜೀವ ರಕ್ಷಕ ಲಸಿಕೆಗಳನ್ನು, ಕಾಲ ಕಾಲಕ್ಕೆ ತಪ್ಪದೇ ಕೊಡಿಸಿ, ಕಾಪಾಡುವಂತೆ, ಚಿತ್ರದುರ್ಗ ಜಿಲ್ಲಾ ಆರೋಗ್ಯಾಧಿಕಾರಿ, ಡಾಕ್ಟರ್ ಡಿ.ಎಂ.ಅಭಿನವ ಹಾಗೂ ಬಳ್ಳಾರಿ ಜಿಲ್ಲೆ ಆರೋಗ್ಯಾಧಿಕಾರಿ ಡಾಕ್ಟರ್ ಯಲ್ಲಾ ರಮೇಶಬಾಬು ಮನವಿ ಮಾಡಿದ್ದಾರೆ.

<><><>

ಖ್ಯಾತಿವೆತ್ತ ಬಾಹ್ಯಾಕಾಶ ವಿಜ್ಞಾನಿ, ಪದ್ಮವಿಭೂಷಣ ಕೆ. ಕಸ್ತೂರಿರಂಗನ್, ಬೆಂಗಳೂರಿನ ತಮ್ಮ ಸ್ವಗೃಹದಲ್ಲಿ, ನಿಧನರಾಗಿದ್ದಾರೆ. ಅವರಿಗೆ 84 ವರ್ಷ ವಯಸ್ಸಾಗಿತ್ತು. ಗಣ್ಯರು ಕಂಬನಿ ಮಿಡಿದಿದ್ದಾರೆ. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಮುಖ್ಯಸ್ಥರಾಗಿ, ಕರ್ನಾಟಕ ಜ್ಞಾನ ಆಯೋಗದ ಅಧ್ಯಕ್ಷರಾಗಿ, ಯೋಜನಾ ಆಯೋಗದ ಸದಸ್ಯರಾಗಿ, ರಾಜ್ಯಸಭೆ ನಾಮನಿರ್ದೇಶಿತ ಸದಸ್ಯರಾಗಿ ಹಾಗೂ ಹಲವು ವಿಶ್ವವಿದ್ಯಾಲಯಗಳ ಉಪ ಕುಲಪತಿಯಾಗಿ, ಗಣನೀಯ ಸೇವೆ ಸಲ್ಲಿಸಿದ್ದಾರೆ. ಪಶ್ಚಿಮಘಟ್ಟದ ಸಂರಕ್ಷಣೆ ಕುರಿತ, ಕಸ್ತೂರಿ ರಂಗನ್ ವರದಿಯಿಂದಾಗಿ, ಅವರು ಜನಜನಿತರಾಗಿದ್ದರು.

<><><>

ಬೆಂಗಳೂರಿನ, ರಾಮನ್ ಸಂಶೋಧನಾ ಸಂಸ್ಥೆಯ ಆವರಣದಲ್ಲಿ, ನಾಳೆ ಭಾನುವಾರ ಬೆಳಗ್ಗೆ 10 ರಿಂದ 12ರ ವರೆಗೆ, ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ, ವ್ಯವಸ್ಥೆ ಮಾಡಲಾಗಿದೆ.

<><><>

ಪೋಪ್ ಫ್ರಾನ್ಸಿಸ್ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ, ಇಂದು ಮಧ್ಯಾಹ್ನ 1.30ಕ್ಕೆ ವ್ಯಾಟಿಕನ್‌ನ ಸೇಂಟ್ ಪೀಟರ್ಸ್ ಬೆಸಿಲಿಕಾ ಬಳಿಯ, ಬರೋಕ್ ಪ್ಲಾಝಾದ ಸೇಟ್ ಮೇರಿ ಮೇಜರ್‌ನಲ್ಲಿ ನಡೆಯಲಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪಾಲ್ಗೊಂಡು, ಅಂತಿಮ ನಮನ ಸಲ್ಲಿಸಲಿದ್ದಾರೆ.

<><><>

ದಿವಂಗತರ ಗೌರವಾರ್ಥ, ಇಂದು ರಾಜ್ಯಾದ್ಯಂತ ಶೋಕಾಚರಣೆ ಘೋಷಿಸಲಾಗಿದೆ. ಮನೋರಂಜನಾ ಕಾರ್ಯಕ್ರಮಗಳನ್ನು ರದ್ದು ಪಡಿಸಲಾಗಿದೆ. ರಾಷ್ಟ್ರ ಧ್ವಜ ಅರ್ಧ ಮಟ್ಟದಲ್ಲಿ ಹಾರಲಿದೆ.

<><><>

ಮಂಗಳೂರಿನ ಯು.ಎಸ್. ಮಲ್ಯ ಒಳಾಂಗಣ ಕ್ರೀಡಾಂಗಣದಲ್ಲಿ, ನಾಳೆ 27 ರಿಂದ 30ರ ವರೆಗೆ, 24ನೇ ರಾಜ್ಯ ಮಟ್ಟದ ವುಶು ಚಾಂಪಿಯನ್‌ಶಿಪ್ ಆಯೋಜಿತವಾಗಿದೆ. ರಾಜ್ಯ ವುಶು ಸಂಸ್ಥೆಯ ಕಾರ್ಯದರ್ಶಿ, ಅಶೋಕ್ ಮೊಕಾಶಿ, ಮಂಗಳೂರಿನಲ್ಲಿ ಮಾಹಿತಿ ನೀಡಿ, ರಾಜ್ಯದ ಎಲ್ಲಾ ಜಿಲ್ಲೆಗಳಿಂದ, 600 ವುಶು ಕ್ರೀಡಾಪಟುಗಳು, ಭಾಗವಹಿಸಲಿದ್ದಾರೆ. ನಾಳೆ ಬೆಳಗ್ಗೆ 10.30ಕ್ಕೆ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಚಾಲನೆ ನೀಡಲಿದ್ದಾರೆ ಎಂದರು.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ನಾಳೆ ಭಾನುವಾರ, ಬೆಳಗ್ಗೆ 11 ಗಂಟೆಗೆ, ಆಕಾಶವಾಣಿಯ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ, ದೇಶ ಮತ್ತು ವಿದೇಶಗಳ ಜನರೊಂದಿಗೆ ತಮ್ಮ ಆಲೋಚನೆಗಳನ್ನು ಹಂಚಿಕೊಳ್ಳಲಿದ್ದಾರೆ. ಇದು ಮನದ ಮಾತಿನ 121ನೇ ಸಂಚಿಕೆಯಾಗಿದೆ.

<><><>

ಉಪ ರಾಷ್ಟ್ರಪತಿ ಜಗದೀಪ ಧನಕರ್ ಅವರು, ಇಂದು ಮಧುಮಲೈ ಹುಲಿ ಸಂರಕ್ಷಿತ ಅಭಯಾರಣ್ಯ ಹಾಗೂ ಸಾಕಾನೆ ಶಿಬಿರಕ್ಕೆ ಭೇಟಿ ನೀಡಲಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರದ, 'ಬಸವ ರಾಷ್ಟ್ರೀಯ ಪುರಸ್ಕಾರ'; ಗ್ರಂಥಾಲಯ ವಿಜ್ಞಾನಿ, ಧಾರವಾಡದ ಎಸ್.ಆರ್. ಗುಂಜಾಳ, ಭಾಜನ.

- ಡಿಜಿಟಲ್ ಭೂ ದಾಖಲೆ ಒದಗಿಸುವ, ನೂತನ ಭೂ ಸುರಕ್ಷಾ ಯೋಜನೆ, 29ರಿಂದ ರಾಜ್ಯಾದ್ಯಂತ ಜಾರಿಗೆ.
- ಇಂದು, ಬೌದ್ಧಿಕ ಹಕ್ಕು, 'ಪೇಟೆಂಟ್' ಜಾಗ್ರತಿ, ದಿನಾಚರಣೆ.
- ಇಂದು, ರಾಷ್ಟ್ರೀಯ ಉದ್ಯೋಗ ಮೇಳ; 51 ಸಾವಿರ ನೇಮಕಾತಿ ಪತ್ರಗಳ ವಿತರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>